ಗಂಡನನ್ನು ದೂರುವ ಮಧ್ಯ ವಯಸ್ಸಿನ ಮಹಿಳೆ. ಮಕ್ಕಳನ್ನು ನೋಡುವುದೇ ಅವಳಿಗೆ ಕಿರಿಕಿರಿ ಆಗುತ್ತಿತ್ತು, ಅವಳ ಕಹಿ, ನಿರರ್ಗಳ ಅಭಿವ್ಯಕ್ತಿಯಾಗಿ ಹೊರಹೊಮ್ಮುತ್ತಿತ್ತು. 'ನನ್ನ ದೊಡ್ಡ ಮಗ ನಿನ್ನ ಮಗನಂತಾಗಿದ್ದರೆ... ಆದರೆ ನೀನು ಯಾವ ಕಂಪೆನಿ ಹೇಳಲಿಲ್ಲ'

'ಯಾವ ಹೆಸರಿನದಾದರೆ ಏನು? ನನಗೆ ನೆನಪಾಗುತ್ತಿಲ್ಲ'

ಪುತುಲ್‌ಳ ತಾಯಿ ಮತ್ತೆ ಕೇಳಿದಳು. ಎಲ್ಲವನ್ನೂ ತಿಳಿಯುವ ತನಕ ಅವಳಿಗೆ ಸಮಾಧಾನ ಇಲ್ಲ. 'ಎಷ್ಟು ಸಿಗಬಹುದು? ಕೇಳಿದ್ದೀಯಾ?'

ಅಮ್ಮನ ಸ್ವರ ಏರಿತು, 'ಕೇಳದೆ ಇರುತ್ತೇನೆಯೇ. ನೂರೈವತ್ತರಿಂದ ಶುರು. ಖಾಯಂ ಮಾಡಿದ ಮೇಲೆ ಇನ್ನೂರಕ್ಕೆ ಏರುತ್ತದೆ'

'ಶುಕು ಅಣ್ಣನಮಗೆ ಪಾರ್ಟಿ ಕೊಡುದಿಲ್ವ?' ಪುತುಲ್ ಕೇಳಿದಳು. ಅವಳ ತಲೆಯನ್ನು ನೇವರಿಸಿ ಹೇಳಿದಳು, 'ಯಾಕೆ ಕೊಡುವುದಿಲ್ಲ ಮೊದಲು ಖಾಯಂ ಆಗಲಿ' ಪುತುಲ್‌ಳ ಅಮ್ಮ, ಧ್ವನಿ ತಗ್ಗಿಸಿ ಹೇಳಿದರೂ ಮಾತಿನ ಅರ್ಥ ಸ್ಪಷ್ಟವಾಗಿತ್ತು. 'ಅಕ್ಕಾ...' ಮುಂದುವರಿಸಿದಳು. 'ಈಗ ನೀನವನಿಗೆ ಮದುವೆ ಮಾಡಬೇಕು. ದುಡಿಯಲಿಕ್ಕೆ ಶುರು ಮಾಡಿರುವುದರಿಂದ ಅವನ ಲಗ್ನ ನಿಶ್ಚಯ ಮಾಡದಿದ್ದರೆ ಸರಿ ಕಾಣುವುದಿಲ್ಲ. ನಮ್ಮ ಪರಿಚಯದಲ್ಲೇ ಎಷ್ಟೋ ಹೆಣ್ಣು ಮಕ್ಕಳಿದ್ದಾರೆ. ನನ್ನ ಝುಕಿಯಾ ಈಗ ಏಳನೆಯ ತರಗತಿ'.

ಎಲ್ಲವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುತ್ತಿದ್ದಂತೆ ಶೌಕತ್‌ನಿಗೆ ಜಿಗುಪ್ಸೆ ಹುಟ್ಟಿತು. ಮಗನೊಬ್ಬನ ಸಾಧನೆ ಎಂದರೆ ತಾಯಿಯ ಹೆಮ್ಮೆ. ಮಗ ದುಡಿಯುವುದೆಂದರೆ ಅಮ್ಮನ ನೆಮ್ಮದಿ. ಆದರೆ ಅವನಮ್ಮನ ಪಾಲಿಗೆ ಅದೃಷ್ಟವಂತ ಮಗನ ಭವಿಷ್ಯವನ್ನು ಕಲೆಕ್ಟರ್ ಕಚೇರಿಯಲ್ಲಿ ಅಂಚೆಚೀಟಿ ಮಾರುವವನ ಹೆಂಡತಿಯ ಹತ್ತಿರ ಮಾಡುವುದು ಅಮ್ಮನಿಗೆ ಹೊಂದುವ ವಿಷಯವಲ್ಲ. ಆ ಹೆಂಗಸನ್ನು ಆಪ್ತಸ್ನೇಹಿತೆ ಅಂದುಕೊಳ್ಳುವುದು. ತಮ್ಮ ಕೌಟುಂಬಿಕ ಅಂತಸ್ತುಗಳ ನಡುವೆ ಅಷ್ಟು ದೊಡ್ಡ ಅಂತರ ಇರುವಾಗ ಪುತುಲ್‌ಳ ಅಮ್ಮ ತನ್ನ ಮಗಳನ್ನು ನನ್ನ ವಧುವಾಗಬಹುದು ಎಂದು ಹೇಗಾದರೂ ಯೋಚಿಸಿದಳು? ಇವನಿಗೆ ಉದ್ಯೋಗದಲ್ಲಿ ಭಡ್ತಿಯೇ ಸಿಗಲಿಕ್ಕಿಲ್ಲ ಎಂದು ಬಗೆದರೆ!

ಅಮ್ಮ ಇನ್ನೂ ಸ್ವಲ್ಪ ಮೆಲ್ಲ ಮಾತನಾಡಬಾರದೇ? ಸಾಮಾನ್ಯ ಬಾಜಾರಿನ ಹೆಂಗಸಿನ ಹಾಗೆ ಕೂಗಬೇಕೇ! ಕಾಲು ಅಗಲಿಸಿ ಕುಳಿತು ಎಲೆ ಅಡಿಕೆ ಬಾಯೊಳಗೆ ತುರುಕುತ್ತ ಜೋರುಜೋರು ಮಾತನಾಡುವ ಅವಳನ್ನು ನೋಡಿದ್ದರೆ ಶೌಕತ್ ನಾಚಿಕೆಯಿಂದ ಸತ್ತೇ ಹೋಗುತ್ತಿದ್ದ. ನೆರೆಹೊರೆಯಲ್ಲಿ ಇನ್ನಾರಿಗೂ ಕೆಲಸವೇ ಸಿಕ್ಕಿಲ್ಲ ಎನ್ನುವಂತೆ, ಉದ್ಯೋಗ ಸಿಕ್ಕಿದ ಸುದ್ದಿಯನ್ನು ಡೋಲು ಬಡಿದು ಘೋಷಿಸುವ ನೀಚ ಸಂಸ್ಕಾರದಂತೆ.

ಅಕಸ್ಮಾತ್ ಆಗಿ ಬಂದ ಬಿರುಗಾಳಿಗೆ ಕಿಟಕಿ ಬಡಿದು ಸದ್ದು ಮಾಡಿತು. ಶೌಕತ್‌ನ ಕನಸು ಮಾಡಿನ ಬಿರುಕುಗಳಿಂದ ಸೋರುತ್ತಿರುವ ನೀರಿನಲ್ಲಿ ಮುಳುಗಿಹೋಯಿತು.

ಇಡೀ ರಾತ್ರಿ ಸುರಿದ ಮಳೆ ಕೊನೆಗೂ ಸೋತು ಬೆಳಿಗ್ಗೆ ನಿಂತಿತ್ತು. ಅಮ್ಮ ತೊಳೆಯಬೇಕಾದ ಮಡಿಕೆ ಅಡುಗೆ ಪಾತ್ರೆಗಳನ್ನು ಹಿಡಿದು ನಲ್ಲಿಯ ಬಳಿ ನಿಂತಿದ್ದಳು. ಅವಳ ಬಿಳಿ ಪಾದಗಳಿಗೆ ಮಸಿ ಬಳಿದುಕೊಂಡಿತ್ತು. ಅಪ್ಪ ಕುರಾನ್ ಓದುವುದು ಮುಗಿಸಿ ಬೆಳಗಿನ ಪ್ರಾರ್ಥನೆ ಮಾಡುತ್ತಿರಬೇಕು. ಅವನೀಗ ಮನೆಯಲ್ಲಿರುವ ಇಬ್ಬರು ಎಳೆಯ ಮಕ್ಕಳನ್ನು ಎಬ್ಬಿಸುತ್ತಾನೆ. 'ಇಷ್ಟು ತಡ ಹಾಸಿಗೆಯಲ್ಲಿ ಬಿದ್ದುಕೊಂಡಿರುವುದು ಒಳ್ಳೆಯದಲ್ಲ' ಮೃದುವಾಗಿ ಹೇಳುತ್ತಾನೆ.

'ಪನು, ಮನು ಬೆಳಗಾಯಿತು, ಏಳಿ' ಸಣ್ಣ ಅಂಗಳದಲ್ಲಿ ಅಪ್ಪ ನಡೆದಾಡುವುದು ಕೇಳಿಸಿತು. 'ಪನು, ಮನು ನೀವು ಏಳುವುದಿಲ್ಲವೇ?'

ಇಷ್ಟಾದ ಮೇಲೆ ಮಕ್ಕಳು ಹಾಸಿಗೆಯಲ್ಲಿರುವುದು ಸಾಧ್ಯ ಇಲ್ಲ, ಏಳಲೇ ಬೇಕು. ಅವರ ಹೆಜ್ಜೆಸದ್ದು, ನಲ್ಲಿಯ ಹತ್ತಿರದ ನಗೆ ಅವನಿಗೆ ಕೇಳಿಸುತ್ತಿತ್ತು. ಆಮೇಲೆ ಅಪ್ಪ ಶೌಕತ್‌ನ ಹಾಸಿಗೆಯ ಹತ್ತಿರ ಬಂದರು. ಗಂಟಲು ಸರಿಮಾಡಿಕೊಂಡರು, ಆದರೆ ಬೇರೆ ದಿನದಂತಲ್ಲ, ಏನೂ ಹೇಳಲೇ ಇಲ್ಲ. ನಂತರ ಒತ್ತಾಯದ ಧ್ವನಿಯಲ್ಲಿ, 'ಮಗ ಇನ್ನೆಷ್ಟು ಹೊತ್ತು ಮಲಗುವೆ? ತಡ ಏಳುವುದು ಯಾರನ್ನೂ ಒಳ್ಳೆಯದಾಗಲು ಬಿಡುವುದಿಲ್ಲ.'

ಶೌಕತ್ ಉತ್ತರಿಸಲಿಲ್ಲ. ಮಲಗಿಯೇ ಇದ್ದ. ಕಣ್ಣುಮುಚ್ಚಿಕೊಂಡದ್ದರಿಂದ ತಂದೆ ಅಲ್ಲಿರುವುದನ್ನು ನಿರ್ಲಕ್ಷಿಸಬಹುದಿತ್ತು. ತನ್ನ ನಟನೆಯಿಂದ ಅವನಿಗೆ ಖುಷಿಯಾಗುತ್ತಿತ್ತು. ಅವನ ಬದುಕಿನ ಅದೃಷ್ಟದ